ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	482
ಮಾನ್ಯ ಸದಸ್ಯರ ಹೆಸರು	ಶ್ರೀ ಬಸವರಾಜ ಹೊರಟ್ಟಿ
ಉತ್ತರಿಸುವ ಸಚಿವರು	ಉನ್ನತ ಶಿಕ್ಷಣ ಸಚಿವರು.
ಉತ್ತರಿಸಬೇಕಾದ ದಿನಾಂಕ	23-07-2019.

ಕ್ರಸಂ	ಪ್ರಶ್ನೆ	ಉತ್ತರ
ಅ)	ಕನ್ನಡ ವಿಶ್ವವಿದ್ಯಾಲಯ ಹಂಪಿಯಲ್ಲಿ ಪ್ರಸ್ತುತ ಅಧೀಕ್ಷಕರಾಗಿ ಕೆಲಸ ನಿರ್ವಹಿಸುತ್ತಿರುವ ನೌಕರರು ಮೂಲವಾಗಿ ಯಾವ ಹುದ್ದೆಗೆ ನೇಮಕವಾಗಿದ್ದರು (ನೇಮಕಾತಿಯ ಬಗ್ಗೆ ಸಂಪೂರ್ಣ ಮಾಹಿತಿ ಒದಗಿಸುವುದು)	<table><tr><th>ಪ್ರಸ್ತುತ ಅಧೀಕ್ಷಕರು</th><th>ಮೂಲವಾಗಿ ನೇಮಕವಾಗಿದ್ದ ಹುದ್ದೆ</th></tr><tr><td>1. ಶ್ರೀ ಮತಿ ಅನಿತಾ ಬೋಥೆಲ್ಲೋ.</td><td>ಕಿರಿಯ ಸಹಾಯಕರು</td></tr><tr><td>2. ಶ್ರೀ ರಿಚರ್ಡ್ ಡಿಸೋಜ.</td><td>ಕಿರಿಯ ಸಹಾಯಕರು.</td></tr><tr><td>3. ಶ್ರೀ ಜೆ.ಬಸವನಗೌಡ.</td><td>ಕಿರಿಯ ಸಹಾಯಕರು.</td></tr><tr><td>4. ಶ್ರೀಮತಿ ಎಂ.ಬಿ. ಆಶಾ.</td><td>ಕಿರಿಯ ಸಹಾಯಕರು</td></tr><tr><td>5. ಶ್ರೀ ಶಶಿಕುಮಾರ.</td><td>ಕಿರಿಯ ಸಹಾಯಕರು.</td></tr><tr><td>6. ಶ್ರೀಸೋಮನಾಥ.ಎಚ್.ಎಂ.</td><td>ಪ್ಯಾಕರ್.</td></tr><tr><td>7. ಜಿ.ಶಿವಕುಮಾರ.</td><td>ಜವಾನರು.</td></tr><tr><td>8. ಶ್ರೀ ಗ್ಯಾನಪ್ಪ ಬಡಿಗೇರ.</td><td>ಕಾವಲುಗಾರರು.</td></tr><tr><td>9. ಶ್ರೀ ಲಕ್ಷ್ಮಣ ಮಹಾಮುನಿ.</td><td>ಶೀಘ್ರಲಿಪಿಗಾರರು.</td></tr><tr><td>10.ಶ್ರೀಮತಿ.ಕೆ.ಎಂ.ಪಾರ್ವತಮ್ಮ</td><td>ಬೆರಳಚ್ಚುಗಾರರು.</td></tr></table>
ಆ)	ಇವರು ವ್ಯಾಟ್ಸಪ್ ಹಾಗೂ ಫೇಸ್‌ಬುಕ್‌ನಲ್ಲಿ ಅವಹೇಳನಕಾರಿ ಹೇಳಿಕೆಗಳನ್ನು ಹಾಕಿದ್ದರಿಂದ ಇವರ ವಿರುದ್ಧ ಕಮಲಾಪುರ ಪೊಲೀಸ್ ಠಾಣೆಯಲ್ಲಿ ಯಾವ ದಿನಾಂಕದಂದು ದೂರು ದಾಖಲಾಗಿತ್ತು;	ಶ್ರೀ ಸೋಮನಾಥ ಎಚ್.ಎಂ. ಇವರ ವಿರುದ್ಧ ದಿನಾಂಕ: 13.05.2017 ರಂದು ದೂರು ದಾಖಲಾಗಿತ್ತು.
ಇ)	ಈ ದೂರಿನನ್ವಯ ಸದರಿಯವರು ಎಷ್ಟು ಅವಧಿಯವರೆಗೆ ನ್ಯಾಯಾಂಗ ಅಭಿರಕ್ಷೆಯಲ್ಲಿದ್ದರು;	ಮೂರು ದಿನಗಳವರೆಗೆ ನ್ಯಾಯಾಂಗ ಅಭಿರಕ್ಷೆಯಲ್ಲಿದ್ದರು.
ಈ)	ಇವರ ವಿರುದ್ಧ ನಿವೃತ್ತ ನ್ಯಾಯಾಧೀಶರಿಂದ ವಿಚಾರಣೆ ನಡೆಸಿ ವಿಶ್ವವಿದ್ಯಾಲಯಕ್ಕೆ ವಿಚಾರಣಾ ವರದಿ ಸಲ್ಲಿಸಲಾಗಿದೆಯೇ;	ಬೇರೆ 8 ಆರೋಪಗಳ ಮೇಲೆ ವಿಚಾರಣೆ ನಡೆದು ವಿಚಾರಣಾ ವರದಿ ಸಲ್ಲಿಕೆಯಾಗಿದೆ. ಕಮಲಾಪುರ ಠಾಣೆಯಲ್ಲಿ ದಾಖಲಾದ ದೂರಿನ ಪ್ರಕರಣದಲ್ಲಿ ಕರ್ನಾಟಕ ಉಚ್ಚ ನ್ಯಾಯಾಲಯ, ಧಾರವಾಡ ಪೀಠವು ತಡೆಯಾಜ್ಞೆ ನೀಡಿದ್ದರಿಂದ ವಿಚಾರಣೆ ನಡೆದಿಲ್ಲ.

ಉ)	ಈ ವರದಿಯನ್ವಯ ಯಾವ ಕ್ರಮ ಕೈಗೊಳ್ಳಲಾಗಿದೆ;	ವಿಚಾರಣಾ ವರದಿಯಲ್ಲಿ ಸಾಬೀತಾದ ಆರೋಪಗಳನ್ನು ಸಮರ್ಥಿಸುವ ಸಾಕ್ಷ್ಯಗಳನ್ನು/ ದಾಖಲೆಗಳನ್ನು ಒದಗಿಸದೇ ಇದ್ದುದರಿಂದ ವಿಚಾರಣಾ ವರದಿಯನ್ನು ಸಕ್ಷಮ ಪ್ರಾಧಿಕಾರವು ಒಪ್ಪಿರುವುದಿಲ್ಲ.
ಊ)	ಸದರಿಯವರು ನೇರವಾಗಿ ಮಾಧ್ಯಮಕ್ಕೆ ಹೋಗಲು ಹಾಗೂ ಮಾಹಿತಿ ಹಕ್ಕಿನಡಿ ಮಾಹಿತಿ ಕೇಳಲು ವಿಶ್ವವಿದ್ಯಾಲಯದ ಅನುಮತಿ ಪಡೆದಿದ್ದಾರೆಯೇ;	ಮಾಧ್ಯಮಕ್ಕೆ ಹೋಗಲು ಮಾಹಿತಿ ಕೇಳಲು ವಿಶ್ವವಿದ್ಯಾಲಯದ ಪೂರ್ವಾನುಮತಿ ಪಡೆಯಬೇಕೆಂಬ ನಿರ್ಬಂಧವು ವಿಶ್ವವಿದ್ಯಾಲಯದ ಅಧಿನಿಯಮದಲ್ಲಿ ಇರುವುದಿಲ್ಲ.
ಋ)	ಅಮಾನತ್ತಾದ ಸದರಿ ನೌಕರರನ್ನು ಪುನಃ ಯಾವಾಗ ಸೇವೆಗೆ ಸೇರಿಸಿಕೊಂಡು ವೇತನ ನೀಡಲಾಗುತ್ತಿದೆ;	ದಿನಾಂಕ 11.6.2019 ರಿಂದ ಕರ್ತವ್ಯಕ್ಕೆ ಹಾಜರಾಗಿರುತ್ತಾರೆ.
ಋ	ಅಮಾನತ್ತು ಹಿಂಪಡೆಯಲು ಕಾರಣಗಳೇನು?	2 ವರ್ಷಗಳಿಂದ ಅಮಾನತ್ತಿನಲ್ಲಿ ಇರಿಸಲಾಗಿದ್ದು, ಸಿ.ಸಿ.ಎ ನಿಯಮಾವಳಿಗಳ ಪ್ರಕಾರ ಅಮಾನತ್ತು ಹಿಂಪಡೆಯಲಾಗಿದೆ.
ಎ)	ಈ ಪ್ರಕರಣದ ಸಂಪೂರ್ಣ ತನಿಖೆಯನ್ನು ಯಾವುದಾದರೂ ತನಿಖಾ ಏಜೆನ್ಸಿಗೆ ವಹಿಸಲು ಸರ್ಕಾರ ಕ್ರಮ ಕೈಗೊಳ್ಳುವುದೇ?	ಮಾನ್ಯ ನ್ಯಾಯಾಲಯದ ತಡೆಯಾಜ್ಞೆ ಇರುವುದರಿಂದ ಮತ್ತೊಂದು ಆಯಾಮದ ತನಿಖೆಗೆ ಅವಕಾಶವಿಲ್ಲ.

ಸಂಖ್ಯೆ: ಇಡಿ 10 ಕೆವಿವಿ 2019

(ಜಿ.ಟಿ.ದೇವೇಗೌಡ)

ಉನ್ನತ ಶಿಕ್ಷಣ ಸಚಿವರು